**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಂ ವಿ.ಸಿ.ನಂಃ 63/2024**

ಪಿಡಬ್ಲ್ಯೂ-1

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 29-09-2025**

**ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಸಾಕ್ಷಿದಾರರು ಗುರುತಿಸಿದ ಫಿರ್ಯಾದಿನ ಯಥಾ ಪ್ರತಿಯನ್ನು ನಿಪಿ-1 ಎಂದು, ಪ್ರ.ವ.ವರದಿಯ ಯಥಾ ಪ್ರತಿಯನ್ನು ನಿಪಿ-2 ಎಂದು, ಸ್ಥಳ ಮಹಜರಿನ ಯಥಾ ಪ್ರತಿಯನ್ನು ನಿಪಿ-3 ಎಂದು, ಅಮಾನತ್ತು ಮಹಜರಿನ ಯಥಾ ಪ್ರತಿಯನ್ನು ನಿಪಿ-4 ಎಂದು, ಗಾಯದ ದೃಢೀಕರಣ ಪತ್ರದ ಯಥಾ ಪ್ರತಿಯನ್ನು ನಿಪಿ-5 ಎಂದು, ಐ.ಎಂ.ವಿ ವರದಿಯ ಯಥಾ ಪ್ರತಿಯನ್ನು ನಿಪಿ-6 ಎಂದು, ದೋಷಾರೋಪಣಾ ಪತ್ರದ ಯಥಾ ಪ್ರತಿಯನ್ನು ನಿಪಿ-7 ಎಂದು, 7 ವೈದ್ಯರ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ-8 ಎಂದು, 15 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ ನಿಪಿ-9 ಎಂದು, 2 ಆರ್ ಟಿ ಸಿ ಗಳನ್ನು ಕ್ರಮವಾಗಿ ನಿಪಿ- 10 ಹಾಗೂ 11 ಎಂದು, ಆಧಾರ್ ಕಾರ್ಡ್ ನ ಪ್ರತಿಯನ್ನು ಮೂಲ ಆಧಾರ್ ಕಾರ್ಡ್ ನ್ನು ತಾಳೆ ಮಾಡಿ ತಾಳೆಯಾದ ಕಾರಣ ನಿಪಿ-12 ಎಂದು, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯನ್ನು ಮೂಲ ಬ್ಯಾಂಕ್ ಪಾಸ್ ಪುಸ್ತಕದ ಜೊತೆ ತಾಳೆ ಮಾಡಿ ತಾಳೆಯಾದ ಕಾರಣ ನಿಪಿ-13 ಎಂದು, ಪ್ಯಾನ್ ಕಾರ್ಡ್ ನ ಪ್ರತಿಯನ್ನು ಮೂಲ ಪ್ಯಾನ್ ಕಾರ್ಡ್ ನೊಂದಿಗೆ ತಾಳೆ ಮಾಡಿ ತಾಳೆಯಾದ ಕಾರಣ ನಿಪಿ-14 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 2ನೇ ಎದುರುದಾರರ ಪರ ವಕೀಲರಾದ ಡಿ.ಜಿ.ಪಿ. ರವರಿಂದಃ**

ನನ್ನ ಹುಟ್ಟಿದ ದಿನಾಂಕಃ 01.01.1966 ಆಗಿರುತ್ತದೆ. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಶಾಲಾ ವರ್ಗಾವಣಾ ಪತ್ರವನ್ನು, ಶಾಲಾ ಅಂಕಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಪಘಾತದಿಂದ ನನಗೆ ಯಾವುದೇ ತೀವ್ರ ಸ್ವರೂಪದ ಗಾಯ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮೂಳೆ ಮುರಿತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಚಿಕಿತ್ಸೆಗಾಗಿ 1 ಲಕ್ಷ ರೂ ವೆಚ್ಚ ಮಾಡಿಲ್ಲ ಎಂದರೆ ಸರಿಯಲ್ಲ. ನಾನು 15 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸೃಷ್ಟಿಸಿದ ಆಸ್ಪತ್ರೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿದ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ವ್ಯವಸಾಯ ಹಾಗೂ ವ್ಯಾಪಾರದಿಂದ 20 ಸಾವಿರ ರೂ ಆದಾಯ ಹೊಂದಿದ್ದೆ ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ವ್ಯಾಪಾರ ಮಾಡುತ್ತಿದ್ದೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ತಿಂಗಳಿಗೆ 20 ಸಾವಿರ ರೂ ಆದಾಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮೂಳೆ ಮುರಿತ ಸಂಭವಿಸದ ಕಾರಣದಿಂದ ಶಾಶ್ವತ ಅಂಗ ನ್ಯೂನತೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಗೂಡ್ಸ್ ವಾಹನದ ಚಾಲಕನ ತಪ್ಪಿನಿಂದ ಸಂಭವಿಸದೇ ಬೈಕ್ ಚಲಾಯಿಸುತ್ತಿದ್ದ ನನ್ನ ತಪ್ಪಿನಿಂದ ಸಂಭಸಿರುತ್ತದೆ ಎಂದರೆ ಸರಿಯಲ್ಲ. ನಾನು ಕೇಳಿರುವಷ್ಟು ಪರಿಹಾರ ನೀಡಲು ಎದುರುದಾರರು ಬಾಧ್ಯರಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.